**ಓ.ಎಸ್. ನಂಃ 360/2025**

**ಪಿ.ಡಬ್ಲ್ಯೂಃ 1**

**ದಿನಾಂಕ 25.03.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ.ಡಿ.ಎ.ಟಿ. ರವರಿಂದಃ</u>**

1. ನಾನು ಅವಿದ್ಯಾವಂತನಾಗಿರುತ್ತೇನೆ. ನಾನು ವೃತ್ತಿಯಲ್ಲಿ ವ್ಯವಸಾಯಗಾರನಾಗಿರುತ್ತೇನೆ. ಒಂದು ತಿಂಗಳಿಗೆ ನನಗೆ 3 ರಿಂದ 4 ಸಾವಿರ ರೂಪಾಯಷ್ಟು ಆದಾಯ ಬರುತ್ತದೆ. ನನ್ನ ಕುಟುಂಬದಲ್ಲಿ ನಾವು ಒಟ್ಟು 5 ಜನ ಸದಸ್ಯರು ಇದ್ದೇವೆ. ನಮ್ಮ ಕುಟುಂಬದ ಎಲ್ಲಾ ಖರ್ಚನ್ನು ಸಹ ನಾನೇ ನೋಡಿಕೊಳ್ಳುತ್ತೇನೆ ಎಂದರೆ ಸರಿ. ನನ್ನ ಕುಟುಂಬದ ನಿರ್ವಹಣೆಗೆ ಒಂದು ತಿಂಗಳಿಗೆ 2 ರಿಂದ 3 ಸಾವಿರ ರೂಪಾಯಿ ಹಣ ಖರ್ಚಾಗುತ್ತದೆ.

2. ನಿಮಗೆ ಒಂದು ತಿಂಗಳಿಗೆ 3 ರಿಂದ 4 ಸಾವಿರ ರೂಪಾಯಷ್ಟು ಆದಾಯವಿರುವ ಕಾರಣ ಒಂದು ವರ್ಷಕ್ಕೆ ಸುಮಾರು 50,000/- ರೂಪಾಯಷ್ಟು ಮಾತ್ರ ಆದಾಯವಿರುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ಒಂದು ವರ್ಷಕ್ಕೆ 4–5 ಲಕ್ಷ ರೂಪಾಯಿಯಷ್ಟು ಆದಾಯವಿದೆ ಎಂದು ನುಡಿದಿರುತ್ತಾರೆ. ನನಗೆ ಒಂದು ವರ್ಷಕ್ಕೆ 4–5 ಲಕ್ಷ ರೂಪಾಯಿಯಷ್ಟು ಆದಾಯವಿದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಸುಮಾರು 8-10 ವರ್ಷಗಳಿಂದ ನನಗೆ ಒಂದು ವರ್ಷಕ್ಕೆ 4–5 ಲಕ್ಷ ರೂಪಾಯಿಯಷ್ಟು ಆದಾಯ ಬರುತ್ತಿದೆ. 8-10 ವರ್ಷಗಳಿಂದ ನಿಮಗೆ ಒಂದು ವರ್ಷಕ್ಕೆ 4–5 ಲಕ್ಷ ರೂಪಾಯಿಯಷ್ಟು ಆದಾಯ ಬರುತ್ತದೆ ಎಂದು ತೋರಿಸಲು ಯಾವುದಾದರೂ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ಜಮೀನು ಇದ್ದು, ಅದರಿಂದ ಆದಾಯ ಬರುತ್ತದೆ ಹಾಗೂ ಅದರೊಂದಿಗೆ ನಾನು ಕೂಲಿ ಕೆಲಸವನ್ನು ಸಹ ಮಾಡುತ್ತೇನೆ ಎಂದು ನುಡಿದಿರುತ್ತಾರೆ.

3. ನನಗೆ ಎರಡು ಎಕರೆ ಜಮೀನು ಇದೆ. ಸದರಿ ಎರಡು ಎಕರೆ ಜಮೀನಿನ ಪೈಕಿ 1 ½ ಎಕರೆಯಲ್ಲಿ ನಾನು ಕಬ್ಬು ಬೆಳೆಯುತ್ತೇನೆ. ಉಳಿದ 20 ಗುಂಟೆಯಲ್ಲಿ ನಾನು ಭತ್ತವನ್ನು ಬೆಳೆಯುತ್ತೇನೆ. ಕಬ್ಬಿನಿಂದ ಒಂದು ವರ್ಷಕ್ಕೆ ನನಗೆ 2 ಲಕ್ಷ ರೂಪಾಯಿ ಆದಾಯ ಬರುತ್ತದೆ.

4. ನಾನು ಇದೇ ನ್ಯಾಯಾಲಯದಲ್ಲಿ ಹೊಸೂರು ಗ್ರಾಮದ ವಸಂತಮ್ಮ ಎನ್ನುವವರ ವಿರುದ್ಧ 2 ಲಕ್ಷ ರೂಪಾಯಿ ಹಣ ವಸೂಲಿಗಾಗಿ ಸಿ.ಸಿ ನಂ. 386/2025 ರ ಚೆಕ್ ಬೌನ್ಸ್ ಪ್ರಕರಣವನ್ನು ಹೂಡಿರುತ್ತೇನೆ ಎಂದರೆ ಸರಿ. ಅದೇ ರೀತಿ ನಾನು ಇದೇ ನ್ಯಾಯಾಲಯದಲ್ಲಿ ರಾಜೇಶ್ ಎನ್ನುವವರ ವಿರುದ್ಧ 50,000/- ರೂಪಾಯಿ ಹಣ ವಸೂಲಿಗಾಗಿ ಸಿ.ಸಿ ನಂ.1054/2024 ರ ಚೆಕ್ ಬೌನ್ಸ್ಪ್ರಕರಣವನ್ನು ಹೂಡಿರುತ್ತೇನೆ ಎಂದರೆ ಸರಿ.

5. ಯಾರಾದರೂ ತಮಗೆ ಹಣಕಾಸಿನ ಅಡಚಣೆ ಇದೆ ಎಂದು ಹೇಳಿ ನನ್ನಲ್ಲಿ ಸಾಲವನ್ನು ಕೇಳಿದರೆ ನಾನು ಅಂತವರಿಗೆ ಬಡ್ಡಿಗಾಗಿ ಸಾಲವನ್ನು ಕೊಡುತ್ತೇನೆ ಎಂದರೆ ಸರಿ. ನಾನು ಬಡ್ಡಿ ವ್ಯವಹಾರವನ್ನು ಮಾಡುತ್ತೇನೆ ಎಂದರೆ ಸರಿಯಲ್ಲ. ಕೆ ಆರ್ ನಗರದ ನಿವಾಸಿ ಆದ ದರ್ಶಿನಿ ಕೋಂ. ನಾಯಕ್ ರವರಿಗೂ ಸಹ ನಾನು ಬಡ್ಡಿಗಾಗಿ ಸಾಲವನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದರ್ಶಿನಿ ರವರಿಗೆ ನಾನು ಬಡ್ಡಿಗಾಗಿ ಸಾಲವನ್ನು ಕೊಟ್ಟರು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ನನಗೆ ದರ್ಶಿನಿ ಎನ್ನುವವರ ಪರಿಚಯವೇ ಇಲ್ಲ. ಸದರಿ ದರ್ಶಿನಿ ರವರು ಪ್ರತಿವಾದಿಯ ಗೆಳತಿ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಹಳಿಯೂರು ಗ್ರಾಮದ ಹೇಮರಾಜು ಬಿ.ಕೆ. ಬಿನ್ ಲೇಟ್ ಕೃಷ್ಣೇಗೌಡರ ಪರಿಚಯ ನನಗೆ ಇದೆ. ಅದೇ ಗ್ರಾಮದ ಗಿರೀಶ್ ಮತ್ತು ಚನ್ನಕೇಶವಯ್ಯ ಎನ್ನುವವರ ಪರಿಚಯ ನನಗೆ ಇದೆ ಎಂದರೆ ಸರಿ.

7. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇದೆ. ನಾನು ಪ್ರತಿವಾದಿಗೆ ಸಾಲವನ್ನು 2023 ನೇ ಇಸವಿಯಲ್ಲಿ ಕೊಟ್ಟಿದ್ದು, ಸಾಲವನ್ನು ಕೊಟ್ಟ ದಿನಾಂಕ ನನಗೆ ನೆನಪಿಲ್ಲ. ನಾನು ಪ್ರತಿವಾದಿಗೆ ಸಾಲವನ್ನು ಕೊಟ್ಟಿರುವುದಿಲ್ಲ ಬದಲಾಗಿ ಪ್ರತಿವಾದಿಯ ಗೆಳತಿಯಾದ ದರ್ಶಿನಿ ರವರಿಗೆ ಸಾಲವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

8. ಸಾಲದ ಹಣವನ್ನು ಮರುಪಾವತಿಸುವಂತೆ ಕೋರಿ ನಾನು ಪ್ರತಿವಾದಿಗೆ ವಕೀಲರ ಮೂಲಕ ನೋಟಿಸನ್ನು ಕಳುಹಿಸಿರುತ್ತೇನೆ. ಸದರಿ ದಿನದಂದು ಸಂಜೆ 4.00 ಗಂಟೆಗೆ ನಾನು ಪ್ರತಿವಾದಿಗೆ ಸಾಲವನ್ನು ಕೊಟ್ಟಿರುತ್ತೇನೆ. ದಿನಾಂಕ 06.11.2023 ರಂದು ನಾನು ಪ್ರತಿವಾದಿಯ ಗೆಳತಿಯಾದ ದರ್ಶಿನಿ ರವರಿಂದಲೂ ಸಹ ಒಂದು ಪ್ರನೋಟ್ ನ್ನು ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದರ್ಶಿನಿ

ಎಂದರೆ ಯಾರು ಎಂದು ನನಗೆ ಗೊತ್ತಿಲ್ಲ ಹಾಗೂ ನನಗೆ ಅವರ ಪರಿಚಯವೇ ಇಲ್ಲ ಎಂದು ಸ್ವತಃ ನುಡಿದಿರುತ್ತಾರೆ.

9. ನಿಪಿ.1 ರ ಛಾಪಾ ಕಾಗದವನ್ನು ಪ್ರತಿವಾದಿಯೇ ತಂದಿರುತ್ತಾರೆ. ಪ್ರತಿವಾದಿಯು ತಂದಿದ್ದ ಖಾಲಿ ಛಾಪಾ ಕಾಗದವನ್ನು ನಾನು ನಿಪಿ.1 ರ ಪ್ರನೋಟ್ ಆಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಿಪಿ.1 ರ ಪ್ರನೋಟ್ ನ್ನು ಪ್ರತಿವಾದಿಯೇ ಸ್ವತಃ ಬರೆಸಿಕೊಟ್ಟಿರುತ್ತಾರೆ ಎಂದು ಸಾಕ್ಷಿಯು ನುಡಿದಿರುತ್ತಾರೆ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**